ಭೂಸ್ವಾಧೀನದ ಹಣದ ಶೇಕಡ 25ರಷ್ಟು ಅಂದರೆ 32,50,000 ರೂ.ಗಳನ್ನು ಪಾವತಿಸುವಂತೆ ನಗರಸಭೆಗೆ ತಿಳಿಸಿರುತ್ತಾರೆ.

ಹಾಸನ ನಗರ ಸಭಾಧ್ಯಕ್ಷರು ಈ ಬೆಲೆಯಲ್ಲಿ ಸದರಿ ಜಮೀನಿನ ಒಟ್ಟು ಮೊತ್ತ ರೂ. 1,30,00,000–00 ಗಳಾಗುವುದರಿಂದ ಮತ್ತೊಮ್ಮೆ ರೈತರೊಂದಿಗೆ ಚರ್ಚಿಸಿ ನಂತರ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಈ ಬಗ್ಗೆ ಹಾಸನ ನಗರ ಸಭಾಧ್ಯಕ್ಷರು ರೈತರೊಂದಿಗೆ ಚರ್ಚೆ ನಡೆಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಕಲ್ಲುಗಣಿ ಕೈಗಾರಿಕೆಗಳಿಂದ ಹತ್ತಿರದ ಮನೆ ಗದ್ದೆಗಳಿಗೆ ಜನ ಜಾನುವಾರುಗಳಿಗೆ ಅಪಾಯ

ಶ್ರೀ ಕೆ. ಸೋಮಪ್ಪಸುವರ್ಣ (ಮೂಡುಬಿದಿರೆ):– ಮಾನ್ಯ ಅಧ್ಯಕ್ಷರೆ, ನನ್ನ ಮತದಾರರ ಕ್ಷೇತ್ರದ ಕೆಮ್ರಾಲ್ ಗ್ರಾಮ ಹರಿಪಾದ್ ಎಂಬಲ್ಲಿ ಬಂಡೆಕಲ್ಲು ಗಣಿಗಾರಿಕೆ ನಡೆಯುವ ಹತ್ತಿರದಲ್ಲಿಯೇ ಮನೆ ಮಂದಿಯ ಬೇಸಾಯದ ಗದ್ದೆಗಳಿದ್ದು ಕಲ್ಲು ಸಿಡಿಯುವಾಗ್ಗೆ ಬಂಡೆ ಕಲ್ಲಿನ ತುಂಡುಗಳು ಹತ್ತಿರದ ಮನೆಗದ್ದೆಗಳಿಗೆ ಸಿಡಿದು ಬೀಳುವುದರಿಂದ ಬಹಳ ಅಪಾಯಕಾರಿ ವಾತಾವರಣ ಉಂಟಾಗಿರುತ್ತದೆ. ಜನ ಜಾನುವಾರುಗಳಿಗೂ ಜೀವ ಅಪಾಯದ ತೊಂದರೆ ಉಂಟಾಗಿರುತ್ತದೆ. ಹತ್ತಿರವಿರುವ ದೇವಸ್ಥಾನಕ್ಕೆ ಇದರಿಂದ ಅಪಾಯದ ತೊಂದರೆ ಉಂಟಾಗಿದೆ. ಕಳೆದ ಹಲವಾರು ವರ್ಷಗಳಿಂದ ಬಂಡೆ ಕಲ್ಲನ್ನು ಸಿಡಿಸಬಾರದೆಂದೂ ಜನರು ಮನವಿ ಅರ್ಪಿಸಿದ್ದರೂ ಯಾವ ತರಹದ ಸಹಾನುಭೂತಿಯು ಸರಕಾರದಿಂದ ದೊರೆತಿರುವುದಿಲ್ಲ. ಇಂತಹ ಅಪಾಯಕಾರಿ ವಾತಾವರಣದಲ್ಲಿ ಬಂಡೆಕಲ್ಲು ತೆಗೆಯುವವರ ಲೈಸೆನ್ಸ್‌ನ್ನು ಸರಕಾರ ಕೊಡಬಾರದೆಂದು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ತೊಂದರೆಯನ್ನು ಹೋಗಲಾಡಿಸಲು ಸರಕಾರ ಏನು ಕ್ರಮ ಕೈಗೊಳ್ಳಲಿದೆ ಎಂದು ತಿಳಿಯ ಬಯಸುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ (ಗಣಿ ಹಾಗೂ ಭೂಗರ್ಭ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಕಲ್ಲು ಗಣಿ ಗುತ್ತಿಗೆ ನಿಬಂಧನೆಯಂತೆ, ಸಾರ್ವಜನಿಕ ರಸ್ತೆ, ಕೆರೆ ಏರಿ, ರೈಲ್ವೆ ಲೈನ್, ಕಟ್ಟಡಗಳಿಂದ ಕನಿಷ್ಠ 50 ಮೀಟರುಗಳ ಸುರಕ್ಷಿತ ದೂರದಲ್ಲಿ ಗಣಿ ಕೆಲಸವನ್ನು ಯಾವುದೇ ಸಿಡಿಮದ್ದು ಉಪಯೋಗಿಸಿ ಗಣಿ ಕೆಲಸವನ್ನು ಮಾಡಬೇಕಾದ ಸಂದರ್ಭದಲ್ಲಿ ಕನಿಷ್ಠ 200ಮೀಟರುಗಳ ಅಂತರವನ್ನು ಬಿಡಬೇಕೆಂಬ ಷರತ್ತನ್ನು ಹಾಕಿರುವುದರಿಂದ ಯಾವುದೇ ಸಂದರ್ಭದಲ್ಲಿ ಗುತ್ತಿಗೆದಾರರು ನಿರ್ಬಂಧವನ್ನು ಮೀರಿದರೆ ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಈಗಾಗಲೇ ಈ ಸ್ಥಳದ ಗುತ್ತಿಗೆದಾರರಿಗೆ ಒಂದು ನೋಟಿಸನ್ನು ತಾರೀಖು 3–2–1993ರಲ್ಲಿ ಜಾರಿ ಮಾಡಲಾಗಿದ್ದು, 200 ಮೀಟರು ಅಂತರದೊಳಗೆ ಸಿಡಿಮದ್ದನ್ನು ಗುತ್ತಿಗೆದಾರರು ಮಾಡಬಾರದೆಂದು ಸೂಚಿಸಲಾಗಿದೆ. ಮಾನ್ಯ ಸದಸ್ಯರು ತಿಳಿಸುವ ಸ್ಥಳದಲ್ಲಿ ಮೇಲಿನ ನಿಬಂಧನೆಯ ಉಲ್ಲಂಘನೆಯಾಗಿದ್ದರೆ, ಗುತ್ತಿಗೆಯನ್ನು ರದ್ದು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗೆ ಆದೇಶ ನೀಡಲಾಗುತ್ತದೆ.

(ಶ್ರೀಮತಿ ಮೋಟಮ್ಮ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

BYE–PASS ROAD FROM HUBLI TO DHARWAD

Sri A.M. Hindasgari:– Respected Madam, The work of laying bye–pass road from Hubli to Dharwad. Under the National Highway Road No.4 was taken up longback. The people of the twin cities are put to hardship and